# BENGALURU NORTH UNIVERSITY

Sri Devaraj Urs Extension, Tamka, Kolar – 563 103

**No.BNU/ R.O/** New of Affiliation/ 286/**2022-23** **Date: 26.08.2022**

**Notification**

**Sub:** Request of Principal to issue Fresh affiliation to the Courses (U.G) for the Year 2022-23- in English version.

**Ref:** 1 Govt .Order E-Office NO.ED.430 UBV2022 Date: 22.08.2022
2. Approval of the Hon'ble Vice Chancellor Dated: 26.08.2022
3. Request of the Principal Dated: 22.08.2022

******

Fresh affiliation is granted to below mention courses as per Section (59) and Sub section 12 of KSU Act 2000 And Ref -01 Govt .Order for the year **2022-23 Visthar Academy, KRC Road, Kothanur Post, Bengaluru-77** , Subjects" to the following terms & conditions.

| COURES | COMBINATIONS | INTAKE |
|---|---|---|
| **BVA** | **Applied Arts** | **20 (Twenty)** |
| | **Art History** | **20 (Twenty)** |
| | **Graphic Arts** | **20 (Twenty)** |
| | **Painting** | **20 (Twenty)** |
| | **Sculpture** | **20 (Twenty)** |

**Note**:- Kindly follow the Rules and regulations as per the Govt Order ED.430 UBV2022 dated:22.08.2022 if not followed the affiliation for the academic year 2023-24 will be cancelled

The Fresh affiliation to the college as per the intake fixed by the Syndicate and LIC for the year of 2022-23. The college shall submit the action taken report indicating the measures taken to improve the lapses and short comings as noted in the report within 15 days from the date of this notification.

CONDITIONS:

1. The college shall strictly observe the conditions noted as per the LIC committee report.
2. University will not consider and approve any excess admission (more than the fixed intake) admissions are made beyond the sanctioned intake for the course.
3. The college shall not enhance the student's strength for any course/s without prior permission of the university.
4. While making admission for the courses, the college shall strictly follow the reservation norms as directed by the Government, time to time.
5. The college shall strictly follow the rules/regulations/ statutory guidelines and such other notifications with respect to students, Teaching & Non-Teaching staff. The admission for the sanctioned courses shall be made as per the affiliation notification issued for the courses and within the sanctioned intake only. The college shall not violate any eligibility rules & regulations while making the admission.

6. As per the Honorable Supreme Court Judgment - In respect of Vaishak and Govt of Rajasthan dated: 13-08-1997, if causing any atrocity, sexual harassment at the college & office or in any working place by any person is an offence. If any person/student is involved in such activities, the college can remove the people from job or debar the students from the college. To stop such atrocities the college shall establish the Compliant Cell as per the order of Supreme Court and UGC.
7. The college shall improve the education courses for development of the students. The college management shall treat the Students, Faculty, Principal and other staff with utmost respect.
8. The college shall not retain the marks cards and such other documents of students with them beyond 6 months. The marks cards and other documents submitted by the student for admission approval shall be returned soon after the approval of admission with intimation to the students.
9. If the student has submitted the request for T.C (Transfer Certificate) the college shall issue the T.C. without any difficulty. While issuing T.C. the college shall collect only the tuition fees for the incomplete period. There is no provision for collecting any extra/ additional fees as per rule.
10. The college shall not collect any capitation fees.
11. The official correspondence shall be in Kannada only.
12. The college shall submit the application for renewal of affiliation for the year 2022-23 without fail.
13. The colleges if completed five years shall obtain recognition of NAAC accreditation.
14. The Principal shall submit the eligible list of Teachers to the Chairman BOE for valuation work without fail. Failing to comply with this condition the affiliation for the college will be cancelled.
15. All the colleges must have atleast two Governing Council meeting in a year and submit report to the University without fail.

**BY ORDER**

29/8

**REGISTRAR**

Registrar
Bengaluru North University
Tamaka, Kolar-Karnataka-563 103.

**To,**
**The Principal**
**Visthar Academy, KRC Road, Kothanur Post Bengaluru-77.**

**Copies to:**

1) P.S to Additional Chief Secretary to the Government Higher Education Department Multi-storied Building, Dr.Ambedkar Veedhi, Bangalore-1
2) The Director, Directorate of Collegiate Education, Ambedkar Veedi, Bangalore-1
3) P.S to Vice-Chancellor, Bengaluru North University, Kolar-563 103.
4) P.A to Registrar (Evl), Bengaluru North University, Kolar-563 103.
5) Finance Offices, Bengaluru North University, Kolar-563 103
6) Office Copy

# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸು ಬಡಾವಣೆ ಟಮಕ, ಕೋಲಾರ-563 103

---

ಸಂಖ್ಯೆ: ಬೆಂ.ಉ.ವಿ./ಕು.ಸ.ಕಾ/ ಹೊ.ಸಂ/ 926 /2022-23 ದಿನಾಂಕ: **26.08.2022**

**ಅಧಿಸೂಚನೆ**

**ವಿಷಯ** : 2022-23 ನೇ ಶೈಕ್ಷಣಿಕ ಸಾಲಿಗೆ ವಿಸ್ತಾರ ಅಕಾಡೆಮಿ, ಕೆ. ಆರ್.ಸಿ ರಸ್ತೆ, ಕೊತ್ತನೂರು ಅಂಚೆ, ಬೆಂಗಳೂರು-77 , ಕಾಲೇಜಿಗೆ ಹೊಸ ಸಂಯೋಜನೆ ನೀಡುವ ಬಗ್ಗೆ."

**ಉಲ್ಲೇಖ:** 1. *ಸರ್ಕಾರದ ಆದೇಶ: ಇ-ಕಛೇರಿ ಸಂ. ಇಡಿ 430 ಯುಬಿವಿ 2022 ದಿನಾಂಕ: 22.08.2022*
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 26.08.2022

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ 59ನೇ ಪ್ರಕರಣದ 12ನೇ ಉಪಬಂಧದ ಅನ್ವಯ ಹಾಗೂ ಉಲ್ಲೇಖ-01 ರಂತೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು, **ವಿಸ್ತಾರ ಅಕಾಡೆಮಿ, ಕೆ. ಆರ್.ಸಿ ರಸ್ತೆ, ಕೊತ್ತನೂರು ಅಂಚೆ, ಬೆಂಗಳೂರು-77** , ಕಾಲೇಜಿಗೆ ಇವರಿಗೆ 2022-23 ನೇ ಶೈಕ್ಷಣಿಕ ಸಾಲಿಗೆ ಕೆಳಕಂಡ ಕೋರ್ಸುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು **ಹೊಸ ಸಂಯೋಜನೆಯನ್ನು** ನೀಡಲಾಗಿದೆ.

| ಕೋರ್ಸ್ | ವಿಷಯ | ವಿದ್ಯಾರ್ಥಿ ಪ್ರಮಾಣ |
|---|---|---|
| ಬಿ.ವಿ.ಎ | ಅಪ್ಲೈಡ್ ಆರ್ಟ್ಸ್ | 20 (ಇಪ್ಪತ್ತು) |
| | ಆರ್ಟ್ ಹಿಸ್ಟರಿ | 20 (ಇಪ್ಪತ್ತು) |
| | ಗ್ರಾಫಿಕ್ ಆರ್ಟ್ಸ್ | 20 (ಇಪ್ಪತ್ತು) |
| | ಪೇಂಟಿಂಗ್ | 20 (ಇಪ್ಪತ್ತು) |
| | ಶಿಲ್ಪ ಕಲೆ | 20 (ಇಪ್ಪತ್ತು) |

***ವಿ.ಸೂ:** ಸರ್ಕಾರದ ಆದೇಶ ಸಂಖ್ಯೆ ಇ-ಕಛೇರಿ ಸಂ. ಇಡಿ 430 ಯುಬಿವಿ 2022 ದಿನಾಂಕ: 22.08.2022 ರ ಆದೇಶದಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ನಿಗದಿತ ಸಮಯದಲ್ಲಿ ಕಡ್ಡಾಯವಾಗಿ ಪಾಲಿಸುವುದು ಇಲ್ಲವಾದಲ್ಲಿ 2023-24 ರ ಸಂಯೋಜನೆಯನ್ನು ರದ್ದುಪಡಿಸಲಾಗುವುದು.***

* ವಿಶ್ವ ವಿದ್ಯಾಲಯವು ಅನುಮೋದಿಸಿರುವ ಕೋರ್ಸುಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿ-2020 ರ ಅನ್ವಯ ಶಿಸ್ತೀಯ ವಿಷಯಗಳನ್ನಾಗಿ ಮಾರ್ಪಾಡಿಸಿ ಪ್ರವೇಶಾತಿಯನ್ನು ವಿದ್ಯಾರ್ಥಿಪ್ರಮಾಣಕ್ಕೆ ಮೀರದಂತೆ ಮಾಡಿಕೊಳ್ಳತಕ್ಕದ್ದು.

* 2021-22ನೇ ಶೈಕ್ಷಣಿಕ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಲಗತ್ತಿಸಿದೆ. ಕಾಲೇಜುಗಳಿಗೆ ಸಿಂಡಿಕೇಟ್ /ಸ್ಥಳೀಯ ವಿಚಾರಣಾ ಸಮಿತಿ ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣದೊಂದಿಗೆ ಮಾತ್ರ ಸಂಯೋಜನೆಯನ್ನು ನವೀಕರಿಸಲಾಗಿದೆ. ಕಾಲೇಜು 15 ದಿನಗಳ ಒಳಗಾಗಿ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ನಮೂದಿಸಿರುವ ಕೊರತೆಗಳನ್ನು ಸರಿದೂಗಿಸಿಕೊಂಡು ಉತ್ತಮ ಪಡಿಸಿಕೊಂಡಿರುವ ಬಗ್ಗೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಕುರಿತು ಅನುಸರಣಾ ವರದಿಯನ್ನು ನೀಡತಕ್ಕದ್ದು. ಇಲ್ಲವಾದಲ್ಲಿ ಮುಂದಿನ ಶೈಕ್ಷಣಿಕ ವರ್ಷದ ಸಂಯೋಜನಾ ನವೀಕರಣದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.

---

**ಷರತ್ತುಗಳು:**

1. ಸ್ಥಳೀಯ ವಿಚಾರಣಾ ಸಮಿತಿಯು ನಮೂದಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.
2. ನಿಗಧಿತ ವಿದ್ಯಾರ್ಥಿ ಪ್ರವೇಶ ಪ್ರಮಾಣವನ್ನು ಮೀರಿದ್ದಲ್ಲಿ ಹೆಚ್ಚುವರಿ ಪ್ರವೇಶ ಪ್ರಮಾಣಕ್ಕೆ ವಿಶ್ವವಿದ್ಯಾಲಯ ಅಂಗೀಕಾರ ನೀಡುವುದಿಲ್ಲ.
3. ಯಾವುದೇ ಕೋರ್ಸಿಗೆ/ಕೋರ್ಸುಗಳಿಗೆ ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ ಶಾಖೆಗಳನ್ನು ಹೆಚ್ಚಿಸಬಾರದು.

4. ಸದರಿ ಪದವಿ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶ ಕಲ್ಪಿಸುವಾಗ ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಮೀಸಲಾತಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
5. ವಿಶ್ವವಿದ್ಯಾಲಯವು, ಕಾಲೇಜಿನ ವಿದ್ಯಾರ್ಥಿಗಳು, ಬೋಧಕರು ಹಾಗೂ ಬೋಧಕೇತರ ನೌಕರರ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿ/ಪರಿನಿಯಮಾವಳಿ ಮತ್ತು ಆದೇಶಗಳನ್ನು ಕಾಲೇಜು ಪಾಲಿಸತಕ್ಕದ್ದು. ಕಾಲೇಜು, ವಿಶ್ವವಿದ್ಯಾಲಯದ ಸಂಯೋಜನಾ ಅಧಿಸೂಚನೆಗನುಗುಣವಾಗಿ ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ ಪ್ರಮಾಣವನ್ನು ಮೀರದಂತೆ ಹಾಗೂ ವಿಶ್ವವಿದ್ಯಾಲಯವು ಕೋರ್ಸುಗಳಿಗೆ ನಿಗಧಿಪಡಿಸಿರುವ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸದಂತೆ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.
6. ವೈಶಾಕ v/s ರಾಜಸ್ಥಾನದ ರಾಜ್ಯ ಸರ್ಕಾರದ ವ್ಯಾಜ್ಯಕ್ಕೆ ಸಂಬಂಧಿಸಿದಂತೆ, ದಿನಾಂಕ:13–8–1997ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, ಕಾಲೇಜು ಅಥವಾ ಕಛೇರಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ, ಯಾವುದೇ ವ್ಯಕ್ತಿಯಿಂದ (ಬೋಧಕ/ಬೋಧಕೇತರ/ಆಡಳಿತಮಂಡಳಿ) ಅಥವಾ ವಿದ್ಯಾರ್ಥಿಯಿಂದ ಮಹಿಳೆಯರಿಗೆ/ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ಕಿರುಕುಳ, ಲೈಂಗಿಕ ಕಿರುಕುಳ ನೀಡುವುದು ಶಿಕ್ಷಾರ್ಹ ಅಪರಾಧವಾಗಿದೆ. ಯಾವುದೇ ವ್ಯಕ್ತಿ/ವಿದ್ಯಾರ್ಥಿ ಈ ರೀತಿಯಾದ ಚುಟುವಟಿಕೆಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರನ್ನು ಕೆಲಸದಿಂದ/ವಿದ್ಯಾರ್ಥಿದೆಸೆಯಿಂದ ವಿಮುಕ್ತಿಗೊಳಿಸಬಹುದಾಗಿದೆ. ಕಾಲೇಜು ಈ ರೀತಿಯ ಅಪರಾದಗಳನ್ನು/ಚಟುವಟಿಕೆಗಳನ್ನು ಮಟ್ಟಹಾಕಲು ಸರ್ವೋಚ್ಚ ನ್ಯಾಯಲಯದ ಆದೇಶದಂತೆ ದೂರು ಸಮಿತಿಯನ್ನು ಸ್ಥಾಪನೆ ಮಾಡತಕ್ಕದ್ದು.
7. ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವ ಮಟ್ಟಕ್ಕೆ ಕಾಲೇಜು ಕೋರ್ಸುಗಳ ಶಿಕ್ಷಣ ಕ್ರಮವನ್ನು ಉತ್ತಮಪಡಿಸತಕ್ಕದ್ದು. ವಿದ್ಯಾರ್ಥಿಗಳನ್ನು ಹಾಗೂ ಸೇವೆಯಲ್ಲಿರುವ ಬೋಧಕರುಗಳನ್ನು ಪ್ರಾಂಶುಪಾಲರು/ ಆಡಳಿತಮಂಡಳಿಯವರು ಸಹಾನುಭೂತಿಯಿಂದ ನೋಡಿಕೊಳ್ಳತಕ್ಕದ್ದು.
8. ಕಾಲೇಜು ವಿನಾಕಾರಣ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು ಆರು ತಿಂಗಳ ಅವಧಿ ಮೀರದಂತೆ ತಮ್ಮಲ್ಲಿಯೇ ಇಟ್ಟುಕೊಳ್ಳತಕ್ಕದ್ದಲ್ಲ, ಪ್ರವೇಶ ಅನುಮೋದನೆಗಾಗಿ ಸಲ್ಲಿಸಿರುವ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು, ಪ್ರವೇಶ ಅನುಮೋದನೆಯಾದ ನಂತರ ವಿದ್ಯಾರ್ಥಿಗಳಿಗೆ ತ್ವರಿತವಾಗಿ ವಿತರಣೆಯನ್ನು ಮಾಡಿ ವಿಶ್ವವಿದ್ಯಾಲಯಕ್ಕೆ ತಿಳಿಸತಕ್ಕದ್ದು.
9. ವಿದ್ಯಾರ್ಥಿಗಳು, ವರ್ಗಾವಣೆ ಪತ್ರವನ್ನು ನೀಡುವ ಬಗ್ಗೆ ಮನವಿ ಸಲ್ಲಿಸಿದಲ್ಲಿ, ಕಾಲೇಜು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ನೀಡದೆ, ವರ್ಗಾವಣೆ ಪತ್ರವನ್ನು ನೀಡತಕ್ಕದ್ದು. ಈ ಬಗ್ಗೆ ಆ ವರ್ಷದ/ಸೆಮಿಸ್ಟರ್‌ನ ಪೂರ್ಣವಾಗದ ಅವಧಿಯ ಬೋದನಾ ಶುಲ್ಕವನ್ನು ಹೊರತುಪಡಿಸಿ, ಯಾವುದೇ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಲು ನಿಯಮಾವಳಿ ಪ್ರಕಾರ ಅನುಮತಿ ಇರುವುದಿಲ್ಲ.
10. ಯಾವುದೇ ರೀತಿಯಾದ ಕ್ಯಾಪಿಟೇಷನ್ ಶುಲ್ಕವನ್ನು ಕಾಲೇಜು ವಸೂಲಿ ಮಾಡತಕ್ಕದ್ದಲ್ಲ.
11. ಆಡಳಿತ ವ್ಯವಹಾರದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸತಕ್ಕದ್ದು.
12. **2023–24**ನೇ ಸಾಲಿಗೆ ಕೋರ್ಸುಗಳ ಸಂಯೋಜನಾ ನವೀಕರಣಕ್ಕೆ ಕಾಲೇಜು ತಪ್ಪದೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
13. *ಐದು ವರ್ಷಗಳನ್ನು ಪೂರೈಸಿರುವ ಕಾಲೇಜುಗಳು ನ್ಯಾಕ್ ಅನುಮೋದನೆಯನ್ನು ಕೂಡಲೇ ಪಡೆದುಕೊಳ್ಳತಕ್ಕದ್ದು.*
14. ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಶಿಕ್ಷಕರ ಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲಾಗುವುದು.
15. ಪ್ರತಿ ಕಾಲೇಜು ಆಯಾ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಎರಡು ಆಡಳಿತ ಮಂಡಳಿ (Governing Council) ಸಭೆಗಳನ್ನು ಕಡ್ಡಾಯವಾಗಿ ನಡೆಸಿ ವರದಿಯನ್ನು ವಿಶ್ವವಿದ್ಯಾಲಯಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.

ಆದೇಶಾನುಸಾರ

[signature] 29/8

ಕುಲಸಚಿವರು

Registrar
Bengaluru North University
Tamaka, Kolar-Karnataka-563 103.

ಗೆ,

ಪ್ರಾಂಶುಪಾಲರು/ಅಧ್ಯಕ್ಷರು
ವಿಸ್ತಾರ ಅಕಾಡೆಮಿ, ಕೆ. ಆರ್.ಸಿ ರಸ್ತೆ, ಕೊತ್ತನೂರು ಅಂಚೆ, ಬೆಂಗಳೂರು–77

ಪ್ರತಿಗಳು:

1) ಸರ್ಕಾರದ  ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–1.
2) ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು–1.
3) ಆಪ್ತಶಾಖೆ, ಕುಲಪತಿಗಳ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.
4) ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.
5) ವಿತ್ತಾಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ
6) ಕಛೇರಿ ಪ್ರತಿ.